## ಬಾವಿಯಲ್ಲಿ ಬಿದ್ದರ ಯೇಳ್ರಿ...

ನಾನು ಚಿಕ್ಕವನಿದ್ದಾಗ ರಜೆ ಕಳೆಯಲು ತಮಿಳು ನಾಡಿನಿಂದ ಬೆಂಗಳೂರಿನಲ್ಲಿದ್ದ ನಮ್ಮ ದೊಡ್ಡಪ್ಪನ ಮನೆಗೆ ಬಂದಿದ್ದೆವು. ನಾವು ಮಾತಾಡುವ ಕನ್ನಡಕ್ಕೂ ಬೆಂಗಳೂರಿನ ಕನ್ನಡಕ್ಕೂ ವ್ಯತ್ಯಾಸವಿತ್ತು. ಒಂದು ದಿನ ರಸ್ತೆಯಲ್ಲಿ ಒಬ್ಬ, 'ಬಾವಿಯಲ್ಲಿ ಬಿದ್ದರ ಯೇಳ್ರಿ' ಎಂದು ಕೂಗುತ್ತಾ ಹೊರಟಿದ್ದ. ಅವನ ಮಾತು ಕೇಳಿ ನಮಗೆಲ್ಲಾ ಅಚ್ಚರಿಯೂ, ಗಾಬರಿಯೂ ಆಯ್ತು. ನನ್ನ ತಾಯಿ, 'ಏನಿದು ವಿಚಿತ್ರ? ಬಾವಿಯಲ್ಲಿ ಬಿದ್ದವರು ಏಳಿರಿ ಅಂತ ಕೂಗುತ್ತಿದ್ದಾನೆ ಈತ?' ಎಂದು ಕೇಳಿದರು. ನನ್ನ ದೊಡ್ಡಮ್ಮ ಹೇಳಿದರು, 'ಅವರು ಬಾವಿಯಲ್ಲಿ ಬಿದ್ದ ವಸ್ತುಗಳನ್ನು ತೆಗೆದುಕೊಡುವವರು. ಅದಕ್ಕೆ ಬಾವಿಯಲ್ಲಿ ಏನಾದ್ರೂ ಬಿದ್ದಿದ್ದರೆ ಹೇಳಿ ಅಂತ ಕೂಗುತ್ತಾ ಬರುತ್ತಾರೆ' ಅಂತ ಬಿಡಿಸಿ ಹೇಳಿದ ಮೇಲೆಯೇ ನಾವೆಲ್ಲಾ ನಿರಾಳವಾದದ್ದು.

**ಬಿ.ಎನ್. ನರಸಿಂಹ ಮೂರ್ತಿ**





## ಹೃದಯಸ್ಪರ್ಶಿ ವಿದಾಯ!

ಕನ್ನಡ ಬಾರದ ಅಧಿಕಾರಿಯೊಬ್ಬರು ನಮ್ಮ ಜೊತೆ ಕೆಲವು ವರ್ಷ ಕೆಲಸ ಮಾಡಿ ಸಹೋದ್ಯೋಗಿಗಳ ಮನ ಗೆದ್ದಿದ್ದರು. ತುಂಬಾ ಒಳ್ಳೆಯವರು. ಅವರಿಗೆ ಕೆಲ ವರ್ಷಗಳ ನಂತರ ಬೇರೆ ಕಡೆ ವರ್ಗವಾಯಿತು. ಬೀಳ್ಕೊಡಿಗೆ ಸಮಾರಂಭದಲ್ಲಿ ಅವರ ಬಗ್ಗೆ ಯಾರಾದರೂ ಇಂಗ್ಲಿಷ್‌ನಲ್ಲಿ ಮಾತಾಡಬೇಕಿತ್ತು. ನಾವೆಲ್ಲಾ ಕನ್ನಡ ಪಂಡಿತರು. ಹೀಗಾಗಿ ಅದನ್ನು ನಮ್ಮ ಮ್ಯಾನೇಜರ್‌ಗೆ ವಹಿಸಿಕೊಡಬೇಕಾಯ್ತು. ಅವರೂ ಮ್ಯಾನೇಜರ್ ಆಗಿದ್ದರಿಂದ ಮಾತಾಡಲೇಬೇಕಾಯ್ತು. ಸಮಾರಂಭದ ಕೊನೆಯಲ್ಲಿ ಅವರ ಬಗ್ಗೆ ಎರಡೇ ಎರಡು ಮಾತು ಹೇಳಿದರು, 'ಟುಡೇ ವಿ ಆರ್ ಲೂಸಿಂಗ್ ಎ ಮ್ಯಾನ್ ವಿಥ್ ಆ್ಯನ್‌ಲಾರ್ಜ್ಡ್ ಹಾರ್ಟ್' (Today we are loosing a man with enlarged heart) ಎಂದಾಗ ಆ ಅಧಿಕಾರಿ ಮೂರ್ಛೆ ಬೀಳುವುದೊಂದು ಬಾಕಿ.

**ವಾ. ಮುರಳೀಧರ**